ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ          ದಿನಾಂಕ : DATE : 03/03/2020

# ದೆಹಲಿ ಗಲಭೆ: ಸಂಸತ್ತಲ್ಲಿ ಹೊಯ್‌ಕೈ

## ಬಿಜೆಪಿ-ಕಾಂಗ್ರೆಸ್ ಸಂಸದರಿಂದ ತಳ್ಳಾಟ | ಸಚಿವ ಅಮಿತ್ ಶಾ ರಾಜೀನಾಮೆಗೆ ವಿಪಕ್ಷಗಳ ಪಟ್ಟು

ನವದೆಹಲಿ: 45ಕ್ಕೂ ಹೆಚ್ಚು ಜನರನ್ನು ಬಲಿ ಪಡೆದ ದೆಹಲಿಯ ಪೌರತ್ವ ತಿದ್ದುಪಡಿ ಕಾಯ್ದೆ ಪರ-ವಿರೋಧಿ ಹಿಂಸಾಚಾರ ಪ್ರಕರಣ, ಸೋಮವಾರ ಸಂಸತ್ತಿನ ಉಭಯ ಸದನಗಳಲ್ಲೂ ಭಾರೀ ವಾಗ್ವಾದ, ಗದ್ದಲಕ್ಕೆ ಕಾರಣವಾಗಿದೆ. ಹಿಂಸಾಚಾರ ಪ್ರಕರಣವನ್ನು ಸಂಸತ್ತಿನ ಉಭಯ ಸದನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಸ್ತಾಪಿಸಿರುವ ಪ್ರತಿಪಕ್ಷಗಳು, ಇದರ ಹೊಣೆ ಹೊತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕೆಂದು ಬಿಗಿಪಟ್ಟು ಹಿಡಿದಿವೆ. ಜೊತೆಗೆ ಲೋಕಸಭೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಭಾರೀ ತಳ್ಳಾಟ-ನೂಕಾಟ ನಡೆದಿದ್ದು ಕೈ ಮಿಲಾಯಿಸುವ ಹಂತಕ್ಕೂ ಹೋಗಿದೆ.

'ಕಾಂಗ್ರೆಸ್‌ನ ರಮ್ಯಾ ಹರಿದಾಸ್ ಮೇಲೆ ಬಿಜೆಪಿ ಸಂಸದೆ ಜಸ್‌ಕೌರ್ ಮೀನಾ ಹಲ್ಲೆ ನಡೆಸಿದರು' ಎಂದು ಸ್ಪೀಕರ್‌ಗೆ ದೂರಲಾಗಿದೆ. ಇದರ ವಿರುದ್ಧ ಬಿಜೆಪಿ ಕೂಡ ಪ್ರತಿದೂರು ನೀಡಿದ್ದು, 'ಬಿಜೆಪಿ ಮಹಿಳಾ ಸಂಸದೆಯರ ಮುಂದೆ ಕಾಂಗ್ರೆಸ್ ಸಂಸದರು ದುರ್ವರ್ತನೆ ಪ್ರದರ್ಶಿಸಿದರು' ಎಂದು ಆಪಾದಿಸಿದೆ.

ಇದೆಲ್ಲದರಿಂದಾಗಿ ಸೋಮವಾರದಿಂದ ಆರಂಭವಾದ ಬಜೆಟ್ ಅಧಿವೇಶನದ ದ್ವಿತೀಯ ಚರಣದ ಮೊದಲ ದಿನ ಗದ್ದಲಕ್ಕೆ ಆಹುತಿಯಾಗಿದೆ. ಈ ನಡುವೆ, 'ದುರ್ವರ್ತನೆ ತೋರಿದ 4 ಕಾಂಗ್ರೆಸ್ ಸದಸ್ಯರನ್ನು ಅಮಾನತುಗೊಳಿಸಬೇಕು' ಎಂದು ಅಮಿತ್ ಶಾ ಅವರು ಲೋಕಸಭಾ ಸ್ಪೀಕರ್‌ಗೆ ಕೋರಿದ್ದಾರೆ ಎಂದು ವರದಿಯಾಗಿದೆ.

**ಲೋಕಸಭೆಯಲ್ಲಿ ತಳ್ಳಾಟ-ನೂಕಾಟ:**

ಬೆಳಗ್ಗೆ ಲೋಕಸಭೆ ಆರಂಭವಾದ ಕೂಡಲೇ ಕಾಂಗ್ರೆಸ್ ಸದಸ್ಯರು 'ಅಮಿತ್ ಶಾ ರಾಜೀನಾಮೆ ಕೊಡಬೇಕು' ಎಂಬ ಬ್ಯಾನರ್ ಹಿಡಿದು 'ಶಾಗೆ ಧಿಕ್ಕಾರ' ಎಂದು ಕೂಗಿದರು. ಸಭಾಧ್ಯಕ್ಷ ಪೀಠದ ಮುಂದೆ ನುಗ್ಗಿದರು. ಇದಕ್ಕೆ ಸಂಸದೀಯ ಸಚಿವ ಪ್ರಹ್ಲಾದ್ ಜೋಶಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಆಗ ಕಾಂಗ್ರೆಸ್‌ನ ಗೌರವ್ ಗೊಗೋಯ್ ಹಾಗೂ ರಣವೀತ್ ಬಿಟ್ಟು, ಕಪ್ಪು ಬ್ಯಾನರ್ ಹಿಡಿದು ಬಿಜೆಪಿ ಸದಸ್ಯರ ಸ್ಥಳಕ್ಕೇ ನುಗ್ಗಿದರು. ಕೆಲವು ಕಾಂಗ್ರೆಸ್ ಸದಸ್ಯರು ಕಾಗದ ಹರಿದು ತೂರಿದರು. ಇದರಿಂದ ಕೆರಳಿದ ಬಿಜೆಪಿ ಸದಸ್ಯರು ಕಾಂಗ್ರೆಸ್ ಸದಸ್ಯರತ್ತ ನುಗ್ಗಿದರು. ಆಗ ಪರಸ್ಪರರು ನೂಕಾಡಿಕೊಂಡು ಪರಿಸ್ಥಿತಿ ಕೈ ಮಿಲಾಯಿಸುವ ಹಂತಕ್ಕೂ ಹೋಯಿತು. ಆಗ ಸದನ ಮಧ್ಯಾಹ್ನ 3ಕ್ಕೆ ಮುಂದೂಡಿಕೆಯಾಯಿತು. ಮಧ್ಯಾಹ್ನ 3ಕ್ಕೆ ಸದನ ಸಮಾವೇಶಗೊಂಡಾಗ ಕೇರಳದ ಕಾಂಗ್ರೆಸ್ ಸಂಸದೆ ರಮ್ಯಾ ಹರಿದಾಸ್ ಅವರ ಮೇಲೆ ಹಲ್ಲೆ ನಡೆಯಿತೆನ್ನಲಾಗಿದೆ. 'ಬಿಜೆಪಿ ಸಂಸದೆ ಜಸ್‌ಕೌರ್ ಮೀನಾ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. ನಾನು ದಲಿತ ಸಂಸದೆಯಾಗಿದ್ದಕ್ಕೆ ಹೀಗೆ ಮಾಡಲಾಗಿದೆ' ಎಂದು ಸ್ಪೀಕರ್‌ಗೆ ರಮ್ಯಾ ದೂರಿದ್ದಾರೆ. ಆದರೆ ಇದಕ್ಕೆ ತಿರುಗೇಟು ನೀಡಿರುವ ಸಚಿವೆ ಸ್ಮೃತಿ ಇರಾನಿ, 'ಬಿಜೆಪಿ ಮಹಿಳಾ ಸಂಸದರ ಮುಂದೆ ಕಾಂಗ್ರೆಸ್ಸಿಗರು ದುರ್ವರ್ತನೆ ತೋರಿದರು. ಕಾಂಗ್ರೆಸ್‌ನಲ್ಲಿನ ಗೂಂಡಾ ಶಕ್ತಿಗಳು ಕಲಾಪಕ್ಕೆ ಭಂಗ ತರುತ್ತಿವೆ. ಇವರ ಮೇಲೆ ಸ್ಪೀಕರ್ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ರಾಜ್ಯಸಭೆಯಲ್ಲೂ ಗದ್ದಲ: 'ದಿಲ್ಲಿ ಹಿಂಸೆಯಿಂದ ತತ್ತರಿಸುತ್ತಿದ್ದರೂ. ಕೇಂದ್ರ ಸರ್ಕಾರ ಗಾಢನಿದ್ರೆಯಲ್ಲಿದೆ' ಎಂದು ಆರೋಪಿಸಿ ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳು ಕೋಲಾಹಲ ಎಬ್ಬಿಸಿದವು.